# ಕರ್ನಾಟಕ ವಿಧಾನಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | 533(584) |
| **ಸದಸ್ಯರ ಹೆಸರು** | ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | 21.02.2022 |
| **ಉತ್ತರಿಸಬೇಕಾದ ಸಚಿವರು** | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಶಂಕರಪುರದಲ್ಲಿರುವ ಮಾಸ್ತಿ ರಂಗ ಮಂದಿರವು ಯಾವ ಇಲಾಖೆಯ ವಶದಲ್ಲಿದೆ; | ಸಾರ್ವಜನಿಕ ಶಿಕ್ಷಣ ಇಲಾಖೆಯ ವಶದಲ್ಲಿದೆ |
| ಆ) | ಈ ಕಟ್ಟಡವನ್ನು ಸರ್ಕಾರದ ಅನುದಾನವನ್ನು ಬಳಸಿ ನಿರ್ಮಾಣ ಮಾಡಲಾಗಿದೆಯೇ; ಅಥವಾ ಖಾಸಗಿಯಾಗಿ ನಿರ್ಮಾಣ ಮಾಡಲಾಗಿದೆಯೇ; ಸರ್ಕಾರದ ಅನುದಾನ ಬಳಸಿ ನಿರ್ಮಾಣ ಮಾಡಿದ್ದಲ್ಲಿ, ಇದರ ಉದ್ದೇಶವೇನು; | ಸರ್ಕಾರಿ ಆದೇಶ ಸಂಖ್ಯೆ:ಇಡಿ 35 ಪಿಎಕ್ಯೂ 73 ದಿನಾಂಕ:28.06.1980 ರಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶಂಕರಪುರಂ ಬೆಂಗಳೂರು ದಕ್ಷಿಣ ವಲಯ-01 ಬೆಂಗಳೂರು ದಕ್ಷಿಣ ಜಿಲ್ಲೆಯ ಶಾಲಾ ಅಭಿವೃದ್ಧಿ ಸಮಿತಿಗೆ 90*30 ಜಾಗದಲ್ಲಿ ರೂ 86,000/- ಗಳ ವೆಚ್ಚದಲ್ಲಿ ಸಾರ್ವಜನಿಕ ವಂತಿಗೆಯ ಮೊತ್ತದಲ್ಲಿ ಮಾಸ್ತಿ ರಂಗ ಮಂದಿರ ಕಟ್ಟಡವನ್ನು ನಿಮಾಣ ಮಾಡಲು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗಿರುತ್ತದೆ.<br>1. The Auditorium should be handed over to the Education Department after construction as per the plan now proposed<br>2. The building may be utilized for running classes.<br>3. The building may also be utilized by public with prior permission from the department and the rent collected should be utilized for the betterment of the school.<br>4. No Government grant will be sanctioned for the construction of the Auditorium. |
| ಇ) | ಪ್ರಸ್ತುತ ಈ ರಂಗ ಮಂದಿರವು ಸಾಂಸ್ಕೃತಿಕ ಕಾರ್ಯಕ್ರಮಗಳ ಹೊರತಾಗಿ ಅನ್ಯ ಕಾರ್ಯಕ್ರಮಳಿಗೆ ಬಳಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಾಸ್ತಿ ರಂಗ ಮಂದಿರ ಆವರಣವನ್ನು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು 2016, 2017, 2018 ಮತ್ತು 2019ರ ಸಾಲಿನಲ್ಲಿ ಬಾಡಿಗೆಗೆ ನೀಡಲಾಗಿರುತ್ತದೆ. ಸದರಿ ರಂಗ ಮಂದಿರವನ್ನು ಸಾಂಸ್ಕೃತಿಕ ಕಾರ್ಯಕ್ರಮಗಳ ಹೊರತಾಗಿ ಅನ್ಯ ಕಾರ್ಯಕ್ರಮಗಳಿಗೆ ನೀಡಿರುವುದಿಲ್ಲ. |

| | | |
|---|---|---|
| ಈ) | ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಪ್ರಸ್ತುತ ಮಾಸ್ತಿ ರಂಗ ಮಂದಿರವು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮಾತ್ರ ಬಳಕೆಯಾಗುತ್ತಿರುವುದರಿಂದ ಯಾವುದೇ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಇಪಿ 72 ಪಿಜಿಸಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು